

ಬೆಳಿಗ್ಗೆ ನಾವೆಲ್ಲ ಬೇಗನೇ ಚಾರಣಕ್ಕೆ ಬೇಕಾದ ಉಪಕರಣಗಳು, ಆಹಾರ ಸಾಮಗ್ರಿಗಳು, ಗಮ್ ಬೂಟಿನೊಂದಿಗೆ ತಯಾರಾಗಿ ಕಾರಿನಲ್ಲಿ ಹೊರಟೆವು. ಮಾರ್ಗ ಮಧ್ಯದಲ್ಲಿ ಸಿಂಧು ನದಿ ಮತ್ತು ಜಂಸ್ಕಾರ್ ನದಿಗಳ ಸಂಗಮದ ವಿಹಂಗಮ ನೋಟದ ಅವಕಾಶವೂ ಸಿಕ್ಕಿತು. ಲೇಹ್‌ನಿಂದ ಪಶ್ಚಿಮಕ್ಕೆ ಎನ್‌ಎಚ್–1 ಕಾರ್ಗಿಲ್ ಮಾರ್ಗದಲ್ಲಿ, 65 ಕಿ.ಮೀ. ದೂರದಲ್ಲಿ ಲಿಕಿರ ಎಂಬ ಹಳ್ಳಿಯಿದೆ. ಇಲ್ಲಿಂದ ಒಂದು ಸಣ್ಣ ರಸ್ತೆ ಬಲಕ್ಕೆ ತಿರುಗಿ ಸುಮದೊ ಹಳ್ಳಿಗೆ ಹೋಗುತ್ತದೆ. ಈ ರಸ್ತೆಯ ಆರಂಭದಲ್ಲೇ ದಾರಿ ತುಂಬ ಹಿಮ ದಟ್ಟವಾಗಿ ಆವರಿಸಿತ್ತು. ಡ್ರೈವರ್ 'ಕಾರು ಇನ್ನು ಮುಂದೆ ಹೋಗುವುದು ಅಸಾಧ್ಯ. ನೀವಿಲ್ಲೆ ಇಳಿದು ನಡೆದು ಹೋಗಿ, 2–3 ಕಿ.ಮೀ. ಹೆಚ್ಚು ನಡೆದರಾಯಿತು ಅಷ್ಟೆ' ಎಂದ. ಹಲವಾರು ಕಾರಣಗಳಿಗಾಗಿ ನಾವಿಲ್ಲಿ ತಲುಪುವಷ್ಟರಲ್ಲಿ ಗಂಟೆ 12 ಆಗಿತ್ತು. ನಮ್ಮ ಅದೃಷ್ಟಕ್ಕೆ ಹಿಮಪಾತ ನಿಂತಿತ್ತು, ಸೂರ್ಯನ ಮಧ್ಯಾಹ್ನದ ಬೆಳಕು ನಿಜಕ್ಕೂ ಹಿತಕಾರಿಯಾಗಿತ್ತು.

ಹೈಕಿಂಗ್ ಕೋಲು, ಗಮ್ ಬೂಟು, ಟ್ರೆಕ್ಕಿಂಗ್ ಬ್ಯಾಗ್, ಕ್ಯಾಮರಾದೊಂದಿಗೆ ನಾವು ನಡೆಯಲು ಆರಂಭಿಸಿದೆವು. ದಾರಿ ತುಂಬಾ ಇದ್ದ ಹಿಮ, ಗಮ್ ಬೂಟು ಆರಂಭದಲ್ಲಿ ಕಿರಿಕಿರಿಯಾಯಿತು. ಗುಡ್ಡ ಏರುತ್ತ, ಸುತ್ತಲಿನ ವಿಹಂಗಮ ನೋಟ ಸವಿಯುತ್ತ, ಮೈಕೊರೆವ ಚಳಿಯಲ್ಲಿ ನಮ್ಮ ಚಾರಣ ಸಾಗಿತ್ತು. ಇನ್ನೊಂದರ್ಧ ಕಿ.ಮೀ. ಕ್ರಮಿಸಿದಾಗ ಬಿಸಿಲಾವರಿಸಿದ ದಾರಿ ಸಿಕ್ಕಿತು. ಸಂಜೆಯ ಎಳೆ ಬಿಸಿಲು ಸೋಕಿದಾಗ ಆದ ಆನಂದ ಅಷ್ಟಿಷ್ಟಲ್ಲ. ದೂರದಲ್ಲಿ ಯಂಗ್ತಾಂಗ್ ಹಳ್ಳಿಯು ಕಾಣಲಾರಂಭಿಸಿತು. ಸಂಜೆ 5.30ಕ್ಕೆ ನಾವು ಸಂಪೂರ್ಣ ಹಿಮಾವೃತ, ನಿರ್ಜನ ಯಂಗ್ತಾಂಗ್ ಹಳ್ಳಿ ತಲುಪಿದೆವು. ಗೈಡ್ ಕೂಡಲೇ ಹೋಮ್ ಸ್ಟೇ ಹುಡುಕಿ ಹೊರಟ.

ಯಂಗ್ತಾಂಗ್ ಭೂಪಟದಲ್ಲಿ ಹುಡುಕಿದರೂ ಸಿಗದ, ಹಿಮಾಲಯ ಶ್ರೇಣಿಯಲ್ಲಿ ಹುದುಗಿದ, ಹತ್ತಾರು ಮನೆಗಳಷ್ಟೇ ಇರುವ ಪುಟ್ಟ ಹಳ್ಳಿ. ಸಮುದ್ರಮಟ್ಟದಿಂದ 3630 ಮೀ. ಎತ್ತರದಲ್ಲಿದೆ. ಇಲ್ಲಿರುವವರೆಲ್ಲ ಲಡಾಕಿ ಬುದ್ಧ ಪಂಗಡಕ್ಕೆ ಸೇರಿದ ಸ್ನೇಹ– ಶ್ರಮಜೀವಿಗಳು. ಜನ ಕೃಷಿಯನ್ನು ಅವಲಂಬಿಸಿದ್ದಾರೆ. ಚಳಿಗಾಲದಲ್ಲಿ ಯಾವುದೇ ಕೃಷಿ ಚಟುವಟಿಕೆಯಿಲ್ಲ. ಹೈನುಗಾರಿಕೆಯೂ ಇದೆ. ಮುಖ್ಯವಾಗಿ ಗೋಧಿ, ಜೋಳ, ಬಟಾಣಿ ಇನ್ನಿತರ ಧವಸ ಧಾನ್ಯಗಳನ್ನು ಬೆಳೆಯುತ್ತಾರಂತೆ. ವಿದ್ಯುತ್ ಸಂಪರ್ಕ ಇದೆ, ಆದರೆ ದೂರಸಂಪರ್ಕ ವ್ಯವಸ್ಥೆ ಇಲ್ಲ. ಈಗ ಚಳಿಗಾಲವಾದ್ದರಿಂದ ಉದ್ಯೋಗ ಅರಸಿ ಇಲ್ಲಿನ ಯುವಕರು ಬೇರೆ ಬೇರೆ ಕಡೆ ಹೋಗಿದ್ದಾರೆ. ಹಾಗಾಗಿ ವೃದ್ಧರು, ಮಹಿಳೆಯರು ಮಾತ್ರ ಕಂಡು ಬಂದರು. ಪ್ರವಾಸೋದ್ಯಮದಿಂದಾಗಿ ಒಂದಿಷ್ಟು ಹೋಮ್ ಸ್ಟೇ ಇಲ್ಲಿವೆ.

ಗೈಡ್ ದೋರ್ಜಿ ಲಡಾಕೀ ಬೌದ್ಧ ದಂಪತಿಯ ಮನೆಯಲ್ಲಿ ನಮಗೆ ಉಳಿದುಕೊಳ್ಳುವ ರೂಮು ತೋರಿಸಿದ. ಕೋಣೆ ವಿಶಾಲವಾಗಿತ್ತು. ಮಧ್ಯದಲ್ಲಿ ಕಟ್ಟಿಗೆಯ ಹೀಟರ್‌ನ ವ್ಯವಸ್ಥೆ ಇತ್ತು. ನಾವು ನಮ್ಮ ಗಮ್ ಬೂಟು, ಬ್ಯಾಗ್‌ಗಳಿಂದ ಬಿಡುಗಡೆ ಹೊಂದಿ ಸುಧಾರಿಸಿಕೊಳ್ಳುವಷ್ಟರಲ್ಲಿ ದೋರ್ಜಿ ಕಟ್ಟಿಗೆ ತಂದು ಹೀಟರ್‌ನ ಒಳಗೆ ಬೆಂಕಿ ಹಚ್ಚಿದ್ದ. ದಪ್ಪ ಹಾಸಿಗೆ, ಕಂಬಳಿಗಳೂ ಬಂದವು. ಅಷ್ಟು ಹೊತ್ತು ತಣ್ಣಗಿದ್ದ ಆ ಕೋಣೆ ಹೀಟರ್ ತಾಪದಿಂದಾಗಿ ನಿಧಾನಕ್ಕೆ ಬಿಸಿಯಾಯಿತು. ದೋರ್ಜಿ ಬಿಸಿ ಬಿಸಿ ಚಹಾ ಹಿಡಿದು ಮತ್ತೆ ಬಂದ. ಆ ಚಳಿಗೆ ಬಿಸಿ ಚಹಾ ಎರಡೆರಡು ಕಪ್ಪು ಒಳಗಿಳಿಯಿತು. ಹುಣ್ಣಿಮೆಯ ಬೆಳದಿಂಗಳಲ್ಲಿ